ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ವಿಶ್ವಜಿತ್ ಶೆಟ್ಟಿ

ಕೆನೆತ್ ಜೆಡಿಯೋಫರ್ -ವಿರುದ್ಧ ಭಾರತ ಒಕ್ಕೂಟ, ಹಣಕಾಸು ಮತ್ತು ಆದಾಯ ಮಂತ್ರಾಲಯ, ದೆಹಲಿ ಮತ್ತು ಇತರರು*

ರಿಟ್ ಅರ್ಜಿ (ಹೆಚ್ಸಿ)ಸಂಖ್ಯೆ: 16/2020, ದಿನಾಂಕ 12 ನೇ ಮೇ, 2020.

ತೀರ್ಪು

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:

ಭಾರತ ಸಂವಿಧಾನದ 226 ನೇ ಅನುಚ್ಛೇದದ ಅಡಿಯಲ್ಲಿ ಈ ಅರ್ಜಿಯನ್ನು ಸಲ್ಲಿಸುವ ಮೂಲಕ, ಅರ್ಜಿದಾರನು ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ಅಕ್ರಮ ಸಾಗಾಣಿಕೆ ನಿಷೇಧ ಅಧಿನಿಯಮ, 1988 ರ (ಸಂಕ್ಷಿಪ್ತವಾಗಿ 66 ” 1988 ರ ಸದರಿ ಅಧಿನಿಯಮ) 3 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಿ ಹೊರಡಿಸಲಾದ 23 ನೇ ಜನವರಿ, 2020 ರ ಆದೇಶದಿಂದ ವಿನಾಯಿತಿ ಪಡೆದುಕೊಂಡಿದ್ದಾನೆ.

2. ಶ್ರೀ ರವಿ ಪ್ರತಾಪ್ ಸಿಂಗ್, ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ, ಹಣಕಾಸು ಮಂತ್ರಾಲಯ, ಕಂದಾಯ ಇಲಾಖೆ [ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ಅಕ್ರಮ ಸಾಗಾಣಿಕೆ ನಿಷೇಧ (ಪಿಐಟಿಎನ್ಡಿಪಿಎಸ್) ಘಟಕ] ಇವರು ಹೊರಡಿಸಿದ ಸದರಿ ಆದೇಶದ ಮೂಲಕ, ಅರ್ಜಿದಾರನನ್ನು ಪ್ರತಿಬಂಧಕವಾಗಿ ಬಂಧಿಸಬೇಕೆಂದು ಆದೇಶಿಸಲಾಗಿತ್ತು.ಭವಿಷ್ಯದಲ್ಲಿ ಮಾದಕ ವಸ್ತುಗಳ ಮತ್ತು ಅಮಲು ಪದಾರ್ಥಗಳ ಅಕ್ರಮ ಸಾಗಾಣಿಕೆಯಲ್ಲಿ ತೊಡಗುವುದರಿಂದ ಅರ್ಜಿದಾರನನ್ನು ತಡೆಯುವ ದೃಷ್ಟಿಯಿಂದ ಸದರಿ ಆದೇಶವನ್ನು ಹೊರಡಿಸಲಾಗಿತ್ತು.7 ನೇ ಫೆಬ್ರುವರಿ, 2020 ರಂದು,ದಿನಾಂಕ: 23 ನೇ ಜನವರಿ, 2020 ರ ಸದರಿ ಆದೇಶವನ್ನು (ಸಂಕ್ಷಿಪ್ತವಾಗಿ ” ಪ್ರಶ್ನಿತ ಆದೇಶ ') ಅರ್ಜಿದಾರನಿಗೆ ಜಾರಿ ಮಾಡಿ, ಆತನನ್ನು ಬಂಧಿಸಲಾಗಿತ್ತು.ಪ್ರಸ್ತುತ ಅರ್ಜಿಯನ್ನು 24 ನೇ ಫೆಬ್ರುವರಿ, 2020 ರಂದು ಸಲ್ಲಿಸಲಾಗಿತ್ತು.ಶ್ರೀ ರವಿ ಪ್ರತಾಪ್ ಸಿಂಗ್, ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ಇವರು, 1988 ರ ಸದರಿ ಅಧಿನಿಯಮದ 3 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಯಾಗಿ ಪ್ರಶ್ನಿತ ಆದೇಶವನ್ನು ಹೊರಡಿಸಿದ್ದರು.

3. 11 ನೇ ಮಾರ್ಚ್, 2020 ರಂದು ಮೊದಲನೇ ಪ್ರತ್ಯರ್ಜಿದಾರ ಸಂಸ್ಥೆಯು, 9 ತನ್ನ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿದೆ.22 ನೇ ಏಪ್ರಿಲ್, 2020 ರಂದು, ಅರ್ಜಿದಾರನು ಹೆಚ್ಚುವರಿ ಕಾರಣಗಳನ್ನು ಮತ್ತು ಪ್ರತಿವಾದವನ್ನು ಎತ್ತಿ ಮನವಿಯನ್ನು ಸಲ್ಲಿಸಿದ್ದು, ಆಕ್ಷೇಪಣೆಯ ಹೆಚ್ಚುವರಿ ಕಾರಣಗಳನ್ನು ನಿರೂಪಿಸಿದ ಐ.ಎ.ಸಂಖ್ಯೆ: 2/2020 ನ್ನು ಸಹ ಸಲ್ಲಿಸಿದ್ದಾನೆ.ಹೆಚ್ಚುವರಿ ಕಾರಣಗಳೊಂದಿಗೆ ವ್ಯವಹರಿಸಿ ಮೊದಲನೇ ಪ್ರತ್ಯರ್ಜಿದಾರರು ಆಕ್ಷೇಪಣೆಗಳ ಹೆಚ್ಚುವರಿ ಹೇಳಿಕೆಯನ್ನು ಸಲ್ಲಿಸಿದ್ದಾರೆ.

4. ಅರ್ಜಿಯನ್ನು ಸಮರ್ಥಿಸಿ ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ಮೊದಲ ನಿವೇದನೆಯೆಂದರೆ, 15 ನೇ ಏಪ್ರಿಲ್, 2020 ರ ಮನವಿಯನ್ನು ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆ ಸಲ್ಲಿಸಲಾಗಿತ್ತಾದರೂ, ಅದನ್ನು 29 ನೇ ಏಪ್ರಿಲ್, 2020 ರವರೆಗೆ ಅವರ ಮುಂದೆ ಮಂಡಿಸಿಯೇ ಇರಲಿಲ್ಲ.ಅದನ್ನು ಅವರ ಮುಂದೆ 29 ನೇ ಏಪ್ರಿಲ್, 2020 ರಂದು ಮಂಡಿಸಲಾಗಿದ್ದು, ಅದನ್ನು ಅದೇ ದಿನದಂದು ಆತುರಾತರವಾಗಿ ನಿರ್ಧರಿಸಲಾಯಿತು.27 ನೇ ಏಪ್ರಿಲ್, 2020 ರಂದು, ಭಾರತ ಸರ್ಕಾರವು 1988 ರ ಸದರಿ ಅಧಿನಿಯಮದ 9 (ಎಫ್) ಪ್ರಕರಣದ ಅಡಿಯಲ್ಲಿ ಸ್ಥಿರೀಕರಣ ಆದೇಶವನ್ನು ಹೊರಡಿತ್ತು ಎಂದು ಅವರು ನಿವೇದಿಸಿಕೊಂಡಿದ್ದಾರೆ.ಸದರಿ ಆದೇಶದಲ್ಲಿ ಅರ್ಜಿದಾರನು ಸಲ್ಲಿಸಿದ ಯಾವುದೇ ಮನವಿಯನ್ನು ಪರಿಗಣನೆ ಮಾಡಿದ್ದನ್ನು ಉಲ್ಲೇಖಿಸಿಲ್ಲವೆಂದು ಅವರು ವಾದಿಸಿದ್ದಾರೆ.15 ನೇ ಏಪ್ರಿಲ್, 2020 ರ ಮನವಿಯನ್ನು ತಳ್ಳಿಹಾಕಿದ್ದಕ್ಕೆ ಕಾರಣಗಳನ್ನು ದಾಖಲಿಸಿ, ಭಾರತ ಸರ್ಕಾರದ ಉಪ-ನಿರ್ದೇಶಕರು ಹೊರಡಿಸಿದದಿನಾಂಕ: 29 ನೇ ಏಪ್ರಿಲ್, 2020 ರ ಮನವಿಯಲ್ಲಿ ಸಹ, ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಯಾಗಿದ್ದ ಶ್ರೀ ರವಿ ಪ್ರತಾಪ್ ಸಿಂಗ್ರವರು ಅದನ್ನು ಪರಿಗಣಿಸಿದ್ದರೆಂಬುದನ್ನು ದಾಖಲಿಸಿಲ್ಲ.ಸಲಹಾ ಮಂಡಳಿಯ ವರದಿಯ ಆಧಾರದ ಮೇಲೆ ಭಾರತ ಸರ್ಕಾರವು ನಿರ್ಣಯ ತೆಗೆದುಕೊಳ್ಳುವವರೆಗೆ ಮನವಿಯನ್ನು ಇತ್ಯರ್ಥದಲ್ಲಿರಿಸಲು ಯಾವುದೇ ಕಾರಣ ಇರಲಿಲ್ಲವೆಂದು ಅವರು ನಿವೇದಿಸಿಕೊಂಡಿರುವರು.ಸರ್ಕಾರವು ಬಂಧನದ ಆದೇಶವನ್ನು ಸ್ಥಿರೀಕರಿಸಿದ ನಂತರವೇ, ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಯು ಮನವಿಯನ್ನು ಪರಿಗಣಿಸಿದ್ದನ್ನು ಗಮನಿಸಿದಾಗ, ಮನವಿಯನ್ನು ಪರಿಣಾಮಕಾರಿಯಾಗಿ ಪರಿಗಣಿಸಲಾಗಿದೆ ಎಂದು ಹೇಳಲಾಗುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಕೇಂದ್ರ ಸರ್ಕಾರಕ್ಕೆ ಅರ್ಜಿದಾರನು ಸಲ್ಲಿಸಿದ್ದದಿನಾಂಕ: 17 ನೇ ಏಪ್ರಿಲ್, 2020 ರ ಮನವಿಯನ್ನು ಸಹ ತಡವಾಗಿ 30 ನೇ ಏಪ್ರಿಲ್, 2020 ರಂದು ನಿರ್ಧರಿಸಲಾಗಿತ್ತು ಎಂದು ಅವರು ನಿವೇದಿಸಿಕೊಂಡಿದ್ದಾರೆ.ಅಂಕಿತ್ ಅಶೋಕ್ ಜಲಾನ್ -ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು 2020 ಎಸ್ಸಿಸಿ ಆನ್ಲೈನ್ ಎಸ್ಸಿ 288 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ಚ ನಿರ್ಣಯವನ್ನು ಒಳಗೊಂಡು ಅವರು ಹಲವಾರು ನಿರ್ಣಯಗಳನ್ನು ಅವಲಂಬಿಸಿದ್ದಾರೆ.

5. ಎರಡನೆಯದಾಗಿ, ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಬಂಧನದ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಸೂಕ್ತ ಕಾಲದೊಳಗೆ ಬಂಧನದ ಜಾರಿಗೆ ಕಾರಣಗಳನ್ನು ನೀಡಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ವಾಸ್ತವವಾಗಿ, 7 ನೇ ಫೆಬ್ರುವರಿ, 2020 ರಂದು ಅರ್ಜಿದಾರನಿಗೆ ಬಂಧನದ ಆದೇಶವನ್ನು ಜಾರಿ ಮಾಡಿದಾಗ, ಬಂಧನದ ಕಾರಣಗಳು ಸಹ ಸಿದ್ಧವಾಗಿರಲಿಲ್ಲವೆಂದು ತೋರಿಸಲು ದಾಖಲೆಯಲ್ಲಿ ಸಾಕ್ಷ್ಯವಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಬಂಧನದ ಕಾರಣಗಳ ಸಂಬಂಧದಲ್ಲಿ ಅವಲಂಬಿಸಿದ್ದ ದಸ್ತಾವೇಜುಗಳಾಗಿರುವ 600 ಕ್ಕಿಂತ ಹೆಚ್ಚು ಪುಟಗಳನ್ನು ಒಳಗೊಂಡಿರುವ ಸಂಕಲನವನ್ನು, 2 ನೇ ಮೇ, 2020 ರಂದು ತಡವಾಗಿ ಮೊದಲ ಸಲಕ್ಕೆ ಅರ್ಜಿದಾರನಿಗೆ ಜಾರಿ ಮಾಡಲು ಪ್ರಯತ್ನಿಸಲಾಗಿತ್ತು, ಅದನ್ನು ಅಂತಿಮವಾಗಿ 4 ನೇ ಮೇ, 2020 ರಂದು ಬಂದೀಖಾನೆಗೆ ಭೇಟಿ ನೀಡಿದ್ದ ಅರ್ಜಿದಾರನನ್ನು ಪ್ರತಿನಿಧಿಸುವ ವಕೀಲರಿಗೆ ನೀಡಲಾಗಿತ್ತು ಎಂದು ಅವರು ನಿವೇದಿಸಿಕೊಂಡಿದ್ದಾರೆ.367 ರಿಂದ 375 ರವರೆಗಿನ ಪುಟಗಳಲ್ಲಿರುವ ಕನ್ನಡ ದಸ್ತಾವೇಜುಗಳ ಭಾಷಾಂತರವನ್ನು 4 ನೇ ಮೇ, 2020 ರಂದೂ ಸಹ ಒದಗಿಸಿರಲಿಲ್ಲವೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ.

6. ಇದಲ್ಲದೆ ಮಾನ್ಯ ನ್ಯಾಯವಾದಿಗಳು, ಅರ್ಜಿದಾರನ ವಿರುದ್ಧ ಆರೋಪಿಸಲಾದ ಕೊನೆಯ ಬಾಧಕವಾದ ಕಾವ್ಯಚಟುವಿಕೆಯು 17 ನೇ ಜನವರಿ, 2019 ರಂದು ಆಗಿದ್ದು, ಸದರಿ ಕಾರಚಟುವಟಿಕೆಗೆ ಸಂಬಂಧಿಸಿದಂತೆ

ಅರ್ಜಿದಾರನನ್ನು 13 ನೇ ಜೂನ್, 2019 ರಂದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು.ಎಂದು ನಿವೇದಿಸಿಕೊಂಡಿದ್ದಾರೆ.13 ನೇ ಜೂನ್, 2019 ರ ನಂತರ ಅರ್ಜಿದಾರನು ಯಾವುದೇ ಘಾತಕ ಕಾರಚಟುವಟಿಕೆಯಲ್ಲಿ ತೊಡಗಿದ್ದನು ಎಂದು ಬಂಧನದ ಕಾರಣಗಳಲ್ಲಿ ಆರೋಪಿಸಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಆದುದರಿಂದ, ಬಂಧನದ ಆದೇಶವನ್ನು ಹೊರಡಿಸುವಲ್ಲಿ ಆದ ದೀರ್ಘ ವಿಳಂಬವನ್ನು ಪರಿಗಣಿಸಿ, ಅರ್ಜಿದಾರನು ಎಸಗಿದ ಆರೋಪಿತ ಘಾತಕ ಕಾವ್ಯಚಟುವಟಿಕೆಗಳು ಮತ್ತು ಬಂಧನದ ಆದೇಶವನ್ನು ಹೊರಡಿಸುವ ಅವಶ್ಯಕತೆ ನಡುವೆ ಇರುವ ನೇರ ಸಂಬಂಧವನ್ನು ಕಡಿದುಹಾಕಲಾಗಿದೆ ಎಂಬುದಾಗಿ ಅವರು ನಿವೇದಿಸಿಕೊಂಡಿದ್ದಾರೆ.ಸಂಬಂಧಪಟ್ಟ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹಾಗೂ ಬಾಹ್ಯ ಸನ್ನಿವೇಶಗಳನ್ನು ಪರಿಗಣಿಸಿರುವುದರಿಂದ, ಬಂಧಿಸುವ ಪ್ರಾಧಿಕಾರಿಯ ವ್ಯಕ್ತಿಗತ ನೆರವೇರಿಕೆಯು ನಿರರ್ಥಕಗೊಂಡಿದೆ ಎಂದು ಅವರು ನಿವೇದಿಸಿಕೊಂಡಿರುವರು.

7. ಭಾರತದ ಮಾನ್ಯ ಹೆಚ್ಚುವರಿ ಸಾಲಿಸಿಟರ್ ಜನರಲ್ರವರು, ಬಂಧನದ ಕಾರಣಗಳಲ್ಲಿ ಅರ್ಜಿದಾರನ ವಿರುದ್ಧ ಮಾಡಲಾದ ಆರೋಪಗಳ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ.ಅರ್ಜಿದಾರನ ಮನಃಪ್ರವೃತ್ತಿಯನ್ನು ಪರಿಗಣಿಸಿ, ಆತನ ಹಿಂದಿನ ಹಿನ್ನೆಲೆ ಮತ್ತು ಅಪರಾಧ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ಪರಿಗಣಿಸಿ, ಅರ್ಜಿದಾರನ ಘಾತಕ ಕಾರಚಟುವಟಿಕೆಗಳು ಮತ್ತು ಪ್ರತಿಬಂಧಕ ಬಂಧನದ ಆದೇಶವನ್ನು ಹೊರಡಿಸುವ ಅವಶ್ಯಕತೆಯ ನಡುವಿನ ನೇರ ಸಂಬಂಧವನ್ನು ಕಡಿದುಹಾಕಲಾಗಿದೆ ಎಂದು ಹೇಳಲಾಗುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಅವರು, ಹರಧನ್ ಸಹಾ ವಿರುದ್ಧ-ಪಶ್ಚಿಮ ಬಂಗಾಳ ರಾಜ್ಯ ಮತ್ತು ಇತರರು(1975) 3 ಎಸ್ಸಿಸಿ 128 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಗಳನ್ನು ಅವಲಂಬಿಸಿದ್ದಾರೆ.ಕಮರುನ್ನೀಸಾ –ವಿರುದ್ಧ ಭಾರತ ಒಕ್ಕೂಟ್ (1991) 1 ಎಸ್ಸಿಸಿ 128 ಮೊಕದ್ದಮೆಯಲ್ಲಿನ 8 ನೇ ಕಂಡಿಕೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿರುವುದನ್ನು ಅವರು ಅವಲಂಬಿಸಿದ್ದಾರೆ.ಭಾರತ ಒಕ್ಕೂಟ ಮತ್ತು ಇನ್ನೊಬ್ಬರು -ವಿರುದ್ಧ-ಡಿಂಪಲ್ ಹ್ಯಾಪಿ ಧಾಕಡ್ 4. 2019 ಎಸ್ಸಿಸಿ ಆನ್ಲೈನ್ ಎಸ್ಸಿ 875 ಮೊಕದ್ದಮೆಯಲ್ಲಿನ 45 ನೇ ಕಂಡಿಕೆಯಲ್ಲಿರುವ ಸರ್ವೋಚ್ಚ ನ್ಯಾಯಾಲಯದ ಚ ಅಭಿಪ್ರಾಯಗಳನ್ನು ಸಹ ಅವರು ಅವಲಂಬಿಸಿದ್ದಾರೆ.ಬಂಧನದ ಆದೇಶ ಹೊರಡಿಸುವಲ್ಲಿ ಆದ ಆರೋಪಿತ ವಿಳಂಬವು ಬಾಧಕವಲ್ಲವೇ ಅಲ್ಲವೆಂದು ಅವರು ವಾದಿಸಿದ್ದಾರೆ.

8. 15 ನೇ ಏಪ್ರಿಲ್, 2020 ರ ಮನವಿಯನ್ನು, ಬಂಧಿಸುವ ಪ್ರಾಧಿಕಾರಿಗೆ 29 ನೇ ಏಪ್ರಿಲ್, 2020 ರಂದು ಮೊದಲ ಸಲ ಕಳುಹಿಸಲಾಗಿತ್ತು ಮತ್ತು ಅದೇ ದಿನದಂದು ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಯು ಅದನ್ನು ತಿರಸ್ಕರಿಸಿದ್ದರು ಎಂದು ಅವರು ನಿವೇದಿಸಿಕೊಂಡಿದ್ದಾರೆ.ಅದೇ ಮನವಿಯನ್ನು ಸಲಹಾ ಮಂಡಳಿಯ ಮುಂದೆ ಮಂಡಿಸಲಾಗಿತ್ತೆಂದು, 18 ನೇ ಏಪ್ರಿಲ್, 2020 ರಂದು ನಡೆದ ಸಭೆಯಲ್ಲಿ, ಸಲಹಾ ಮಂಡಳಿಯು ಸದರಿ ಮನವಿಯನ್ನು ಪರಿಗಣಿಸಿ, ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತ್ತೆಂದು, ಅದರ ಆಧಾರದ ಮೇಲೆ ಪ್ರಶ್ನಿತ ಬಂಧನದ ಆದೇಶವನ್ನು ಸ್ಥಿರೀಕರಿಸಲಾಗಿತ್ತು ಎಂದು ಅವರು ನಿವೇದಿಸಿಕೊಂಡಿದ್ದಾರೆ.ಸದರಿ ಮನವಿಯನ್ನು ಕೇಂದ್ರ ಸರ್ಕಾರವು ಸಹ ಪರಿಗಣಿಸಿ, ಅದನ್ನು 30 ನೇ ಏಪ್ರಿಲ್, 2020 ರ ಜ್ಞಾಪನಪತ್ರದ ಮೂಲಕ ತಳ್ಳಿಹಾಕಿತ್ತೆಂದು ಅವರು ನಿವೇದಿಸಿಕೊಂಡಿದ್ದಾರೆ.

9. ಮನವಿಯನ್ನು ವಿಲೆ ಮಾಡುವಲ್ಲಿ ಸ್ವಲ್ಪಮಟ್ಟಿನ ವಿಳಂಬವಾಗಿರುವುದಕ್ಕೆ ಅಗತ್ಯಕ್ಕಿಂತ ಹೆಚ್ಚು ವಿವರಣೆ ಇದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಚ ಹಲವು ಮೊಕದ್ದಮೆಗಳಲ್ಲಿ, ಸರ್ವೋಚ್ಚ ನ್ಯಾಯಾಲಯವು,

ಮನವಿಯನ್ನು ಚ ಪರಿಗಣಿಸುವಲ್ಲಿ ಕೆಲವು ತಿಂಗಳುಗಳ ವಿಳಂಬವಾಗಿದ್ದ ಬಂಧನದ ಆದೇಶವನ್ನು ಸ್ಥಿರೀಕರಿಸಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಬಂಧನಕ್ಕೆ ಕಾರಣಗಳನ್ನು ನೀಡುವಲ್ಲಿ ಯಾವುದೇ ವಿಳಂಬವಾಗಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಬಂಧನದ ಕಾರಣಗಳು ಮತ್ತು ಅದಕ್ಕೆ ಲಗತ್ತಿಸಿದ ಎಲ್ಲ ಅನುಬಂಧಗಳು, ಕನ್ನಡ ದಸ್ತಾವೇಜುಗಳ ಭಾಷಾಂತರ ಸಹಿತ 600 ಪುಟಗಳಿಗಿಂತ ಹೆಚ್ಚಾಗಿದ್ದು, ಅದನ್ನು 8 ನೇ ಫೆಬ್ರುವರಿ, 2020 ರಂದು ಅರ್ಜಿದಾರನಿಗೆ ನೀಡಲಾಗಿತ್ತು ಮತ್ತು ಪ್ರತಿಯೊಂದು ಪುಟದ ಮೇಲೆ ಆತನ ಸ್ವೀಕೃತಿಯನ್ನು ಪಡೆಯಲಾಗಿತ್ತು ಎಂದು ಅವರು ವಾದಿಸಿದ್ದಾರೆ.ಆರೋಪಗಳ ಗಂಭೀರತೆ ಮತ್ತು ಅರ್ಜಿದಾರನು ನಡೆಸುತ್ತಿದ್ದ ಘಾತಕ ಕಾರಚಟುವಟಿಕೆಗಳ ಸ್ವರೂಪವನ್ನು ಪರಿಗಣಿಸಿ, ಈ ನ್ಯಾಯಾಲಯವು ಬಂಧನದ ಆದೇಶದಲ್ಲಿ ಹಸ್ತಕ್ಷೇಪ ಮಾಡಬಾರದೆ ಂ ದು ಅವರು ನಿವೇದಿಸಿಕೊಂಡಿದ್ದಾರೆ.ಬಂಧನದ ಕಾರಣಗಳನ್ನು ಮೇ, 2020 ರಲ್ಲಿ ಮೊದಲ ಬಾರಿಗೆ ಜಾರಿ ಮಾಡಲಾಗಿತ್ತೆಂದು ಆರೋಪಿಸಲು ಯಾವುದೇ ಆಧಾರವಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಮಾನ್ಯ ಹೆಚ್ಚುವರಿ ಸಾಲಿಸಿಟರ್ ಜನರಲ್ರವರು, ಭಾರತ ಸಂವಿಧಾನದ 226 ನೇ ಅನುಚ್ಛೇದದ ಅಡಿಯಲ್ಲಿ ರಿಟ್ ಅಧಿಕಾರವ್ಯಾಪ್ತಿಯಲ್ಲಿ ಯಾವುದೇ ಹಸ್ತಕ್ಷೇಪದ ಅಗತ್ಯವಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.

10. ಪಕ್ಷಕಾರರ ನಿವೇದನೆಗಳನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ.ಭಾರತ ಸಂವಿಧಾನದ 22 ನೇ ಅನುಚ್ಛೇದದ ( 5) ನೇ ಖಂಡದ ಅಡಿಯಲ್ಲಿ, ಪ್ರತಿಬಂಧಕ ಬಂಧನದ ಆದೇಶವನ್ನು ಮಾಡುವ ಪ್ರಾಧಿಕಾರವು, ಬಂಧನದ ಆದೇಶದ ವಿರುದ್ಧ ಮನವಿ ಸಲ್ಲಿಸಲು ಬಂಧಿಗೆ ಒಂದು ಅವಕಾಶವನ್ನು ನೀಡುವ ಅಗತ್ಯವಿದೆ.ಮನವಿಗೆ ಸಂಬಂಧಿಸಿದ ಕಾನೂನಿಗೆ ಸಂಬಂಧಪಡುವಷ್ಟರಮಟ್ಟಿಗೆ, ಅದನ್ನು ನ್ಯಾಯಯುತವಾಗಿ ಇತ್ಯರ್ಥಗೊಳಿಸಲಾಗಿದೆ.ಕೆ.ಎಮ್. ಅಬ್ದುಲ್ಲಾ ಕುನ್ಹಿ ಮತ್ತು ಬಿ.ಎಲ್. ಅಬ್ದುಲ್ ಖಾದರ್ ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು (1991) 1 ಎಸ್ಸಿಸಿ 476 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠದ ಸುಪರಿಚಿತ ಚ ನಿರ್ಣಯದ 12 ನೇ ಕಂಡಿಕೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ವಿಷಯ ಕುರಿತು ಚ ವಿಧಿಸಿದ ಕಾನೂನನ್ನು ಪುನರುಚ್ಚರಿಸಿದೆ.ಸದರಿ ನಿರ್ಣಯದ 12 ನೇ ಕಂಡಿಕೆಯನ್ನು ಹೀಗೆ ಓದಲಾಗಿದೆ:

"12. ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮನವಿಯು, ನಮ್ಮ ಸಂವಿಧಾನದ 21 ನೇ ಅನುಚ್ಛೇದದಲ್ಲಿ ಅಳವಡಿಸಿದ ಅತ್ಯಂತ ಮಾನ್ಯತೆ ನೀಡಲಾದ ಹಕ್ಕಾಗಿದೆ.ಆದುದರಿಂದ, 22 ನೇ ಅನುಚ್ಛೇದದ ( 5) ನೇ ಖಂಡವು, ಸಾಧ್ಯವಾದಷ್ಟು ಬೇಗನೆ ಮನವಿಯನ್ನು ಪರಿಗಣಿಸಲು ಸರ್ಕಾರದ ಮೇಲೆ ಕಾನೂನು ಬಾಧ್ಯತೆಯನ್ನು ಹೊರಿಸುತ್ತದೆ.ಬಂಧಿಯು ಮನವಿಯನ್ನು ಪರಿಗಣಿಸಲು ಮತ್ತು ಅದನ್ನು ಸಾಧ್ಯವಿದ್ದಷ್ಟು ಬೇಗನೆ ವಿಲೆ ಮಾಡಲು ಯಾವ ಪ್ರಾಧಿಕಾರಕ್ಕೆ ಬಂಧಿಯು ತನ್ನ ಮನವಿಯನ್ನು ಸಲ್ಲಿಸುತ್ತಾನೆಯೋ, ಆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸೂಚಿಸುವುದು ಸಂವಿಧಾನಿಕ ನಿರ್ದೇಶನವಾಗಿದೆ.22 ನೇ ಅನುಚ್ಛೇದದ ( 5) ನೇ ಖಂಡದಲ್ಲಿ ಬರುವ " ಸಾಧ್ಯವಿದ್ದಷ್ಟೂ ಬೇಗನೆ " ಎಂಬ ಪದಗಳು, ಮನವಿಯನ್ನು ಶೀಘ್ರವಾಗಿ ಪರಿಗಣಿಸಿ, ತಪ್ಪಿಸಬಹುದಾದ ವಿಳಂಬವಿಲ್ಲದೆ ತುರ್ತಾಗಿ ವಿಲೇ ಮಾಡಬೇಕೆಂಬ ಕಾನೂನು ರಚನಾಕಾರರ ಕಾಳಜಿಯನ್ನು ಬಿಂಬಿಸುತ್ತದೆ.ಆದಾಗ್ಯೂ, ಈ ಸಂಬಂಧದಲ್ಲಿ ಯಾವುದೇ ಕಟ್ಟುನಿಟ್ಟಾದ ನಿಯಮವಿರಲು ಸಾಧ್ಯವಿಲ್ಲ.ಅದು ಪ್ರತಿಯೊಂದು ಮೊಕದ್ದಮೆಯ ವಾಸ್ತವಾಂಶಗಳು ಮತ್ತು ಸಂದರ್ಭಗಳನ್ನಾಧರಿಸಿರುತ್ತದೆ.ಸಂವಿಧಾನದ ಅಡಿಯಲ್ಲಾಗಲಿ ಅಥವಾ ಮನವಿ ಕುರಿತು ವ್ಯವಹರಿಸುವ ಸಂಬಂಧಪಟ್ಟ ಬಂಧನ ಸಂಬಂಧಿ ಕಾನೂನಿನ ಅಡಿಯಲ್ಲಾಗಲಿ, ಯಾವುದೇ ಸಮಯ ಮಿತಿಯನ್ನು ನಿಗದಿಪಡಿಸಿಲ್ಲ.ಆದಾಗ್ಯೂ, ಮನವಿಯನ್ನು ಪರಿಗಣಿಸುವಲ್ಲಿ ನಿಷ್ಕ್ರಿಯ ಉಪೇಕ್ಷೆ, ಅಸಡ್ಡೆ ಅಥವಾ ಸಂವೇದನಾಶೂನ್ಯ ಪ್ರವೃತ್ತಿ ಇರಬಾರದು ಎಂಬುದು

ಅಗತ್ಯತೆಯಾಗಿದೆ.ಮನವಿಯನ್ನು ವಿಲೆ ಮಾಡುವಲ್ಲಿ ಇರುವ ಯಾವುದೇ ವಿವರಿಸಲಾಗದ ವಿಳಂಬವು ಸಾಂವಿಧಾನಿಕ ಅಗತ್ಯತೆಯ ಉಲ್ಲಂಘನೆಯಾಗುವುದು ಮತ್ತು ಅನುಮತಿಸಲಾಗದ ಹಾಗೂ ಕಾನೂನುಬಾಹಿರವಾದ ನಿರಂತರ ಬಂಧನವಾಗುವುದು.ಇದಕ್ಕೆ, ಈ ನ್ಯಾಯಾಲಯದ ತೀರ್ಪುಗಳ ಸರಣಿಯ ಮೂಲಕ ಒತ್ತು ನೀಡಲಾಗಿದೆ ಮತ್ತು ಮರು-ಒತ್ತು ನೀಡಲಾಗಿದೆ. "

(ಒತ್ತು ನೀಡಲಾಗಿದೆ)

11. ಗುಣಾರ್ಹತೆಗಳ ಆಧಾರದ ಮೇಲೆ ನಿರ್ದಿಷ್ಟ ವಾದಗಳ ಕಡೆಗೆ ನಾವು ಗಮನಹರಿಸುವ ಮೊದಲು, ಕಮಲೇಶ್ಕುಮಾರ್ ಈಶ್ವರದಾಸ್ ಪಟೇಲ್ ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು- 6 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ಸಾಂವಿಧಾನಿಕ ಪೀಠವು ವಿಧಿಸಿದ ಮತ್ತು ನಿರ್ದಿಷ್ಟವಾಗಿ 49 ನೇ ಕಂಡಿಕೆಯಲ್ಲಿರುವ ನಿಯಮವನ್ನು ಸಹ ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.ಅದನ್ನು ಈ ಕೆಳಗಿನಂತೆ ಓದಲಾಗಿದೆ:

"49. ಈ ಹಂತದಲ್ಲಿ, ಕೆಲವು ಬಂಧಿಗಳು, ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ಕಾನೂನುಬಾಹಿರ ಕಳ್ಳಸಾಗಾಣಿಕೆಯಲ್ಲಿ ಹಾಗೂ ಇನ್ನಿತರ ರಾಷ್ಟ್ರ ದ್ರೋಹ ಕಾರಚಟುವಟಿಕೆಗಳಲ್ಲಿ ತೊಡಗಿದ್ದು, ಅದು ರಾಷ್ಟ್ರದ ಆರ್ಥಿಕತೆಗೆ ಅತ್ಯಂತ ಅಪಾಯಕಾರಿಯಾಗಿದೆ ಎಂಬುದು ಮಾನ್ಯ ಹೆಚ್ಚುವ ವರಿ ಸಾಲಿಸಿಟರ್ ಜನರಲ್ರವರ ನಿವೇದನೆಯಾಗಿದೆ.ಬಂಧಿಗಳ ಕಾರಚಟುವಟಿಕೆಗಳ ಸ್ವರೂಪವನ್ನು ಗಮನಕ್ಕೆ ತೆಗೆದುಕೊಂಡಲ್ಲಿ, ಅವರ ವಿರುದ್ಧ ಮಾಡಲಾದ ಬಂಧನದ ಆದೇಶಗಳಲ್ಲಿ ಮಧ್ಯ ಪ್ರವೇಶಿಸುವುದನ್ನು ಮೊಕದ್ದಮೆಗಳು ಸಮರ್ಥಿಸುವುದಿಲ್ಲವೆಂದು ಅವರು ವಾದಿಸಿದ್ದಾರೆ.ಬಂಧಿಯು ತೊಡಗಿಕೊಂಡಿರುವನೆಂದು ಆರೋಪಿಸಿರುವ ಕಾರಚಟುವಟಿಕೆಗಳ ಅಪಾಯಕಾರಿ ಪರಿಣಾಮಗಳ ಬಗ್ಗೆ ನಾವು ಗಮನ ಹರಿಸದೆ ಇಲ್ಲ. ಆದರೆ, ಜನರ ಮೂಲಭೂತ ಹಕ್ಕುಗಳನ್ನು, ವಿಶೇಷವಾಗಿ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು ಜಾರಿಗೊಳಿಸುವ ನಮ್ಮ ಸಾಂವಿಧಾನಕ ಬದ್ಧತೆಯನ್ನು ನಿರ್ವಹಿಸುವಾಗ, ಈ ಪರಿಗಣನಾಂಶಗಳು ಪ್ರಭಾವ ಬೀರಲು ನಾವು ಅವಕಾಶ ನೀಡಲಾಗುವುದಿಲ್ಲ.ಸ್ವಾತಂತ್ರ್ಯದ ಇತಿಹಾಸವು ಪ್ರಕ್ರಿಯಾ ಸುರಕ್ಷತೆಗಳ ಇತಿಹಾಸವಾಗಿರುತ್ತದೆ ಎಂದು ಹೇಳಲಾಗಿದೆ.ಪ್ರತಿಬಂಧಕ ಬಂಧನವು, ವೈಯಕ್ತಿಕ ಸ್ವಾತಂತ್ರ್ಯದ ಹಕ್ಕಿನ ಮೇಲೆ ಗಂಭೀರ ಅತಿಕ್ರಮಣವನ್ನು ಒಳಗೊಳ್ಳುತ್ತದೆ ಎಂಬ ಅರಿವಿನಿಂದಲೇ, ಸಂವಿಧಾನ ರಚನಾಕಾರರು, 22 ನೇ ಅನುಚ್ಛೇದದ ( 4) ನೇ ಮತ್ತು ( 5) ನೇ ಖಂಡಗಳಲ್ಲಿ, ಪ್ರತಿಬಂಧಕವಾಗಿ ಬಂಧಿಸಬೇಕೆಂದು ಕೋರಲಾಗಿರುವ ವ್ಯಕ್ತಿಗಳ ರಕ್ಷಣೆಗಾಗಿ ಕೆಲವು ಕನಿಷ್ಠ ರಕ್ಷಣೋಪಾಯಗಳನ್ನು ಸೇರಿಸುವ ಮೂಲಕ ಕಾಳಜಿ ವಹಿಸಿದ್ದಾರೆ.ಈ ರಕ್ಷಣೆಗಳ ಬಗ್ಗೆ " ನ್ಯಾಯಾಲಯಗಳು ಸತತವಾಗಿ ನಿಗಾವಹಿಸಬೇಕಾದ ಮತ್ತು ಜಾರಿಗೊಳಿಸಬೇಕಾದ ಅಗತ್ಯವಿದೆ.ಅವುಗಳ ಕಟ್ಟುನಿಟ್ಟಿನ ಪಾಲನೆಯನ್ನು ಒಬ್ಬ ನಿರ್ದಿಷ್ಟ ವ್ಯಕ್ತಿಯ ಕಾರಚಟುವಟಿಕೆಗಳ ಸ್ವರೂಪದ ಆಧಾರದ ಮೇಲೆ ಬದಲಾಯಿಸಲಾಗುವುದಿಲ್ಲ.ಈ ಸಂದರ್ಭದಲ್ಲಿ ನಾವು, ಇಂಥಹುದೇ ನಿವೇದನೆಯನ್ನು ತಿರಸ್ಕರಿಸುವಾಗ ಈ ನ್ಯಾಯಾಲಯವು ಈ ಮೊದಲು ಹೇಳಿದ್ದನ್ನೇ ಪುನರುಚ್ಚರಿಸುತ್ತೇವೆ.

" ಆ ಬಂಧಿಯು ಕಳ್ಳಸಾಗಾಣಿಕೆದಾರನಾಗಿರಬಹುದು, ಆತನ ತಂಡದ (ಮತ್ತು ಅವರ ಸಂಖ್ಯೆ ಹೇಗೆ ಹೆಚ್ಚುತ್ತಿದೆ!) ಕಾರಚಟುವಟಿಕೆಗಳು ಭಾರತದ ಆರ್ಥಿಕತೆಯನ್ನು ದುರ್ಬಲಗೊಳಿಸಿರುವುದರಿಂದ, ಅದು ಸಹಾನುಭೂತಿಗೆ ಅರ್ಹವಲ್ಲದಿರಬಹುದು.ಆದರೆ, ಪ್ರತಿಬಂಧಕ ಬಂಧನದ ಕಾನೂನುಗಳ ಅಡಿಯಲ್ಲಿ ಬಂಧಿತರಾದ ವ್ಯಕ್ತಿಗಳಿಗೆ ರಕ್ಷಣೆಯ ಅಲ್ಪಾಂಶವನ್ನು ಮಾತ್ರ ಅವು ನೀಡುತ್ತವೆ ಮತ್ತು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಿಡುಗಡೆ

ಮತ್ತು ಸ್ವಾತಂತ್ರ್ಯಕ್ಕೆ ಯಾವುದಾದರೂ ಅರ್ಥವಿದ್ದರೆ, ಕನಿಷ್ಠ ಪಕ್ಷ ಆ ರಕ್ಷಣೆಗಳನ್ನು ಬಂಧಿಗೆ ನಿರಾಕರಿಸಲಾಗುವುದಿಲ್ಲ ಎಂಬುದು ಅವಶ್ಯಕವಾಗಿದೆ. "(ಒತ್ತು ನೀಡಲಾಗಿದೆ)

12. ಆದುದರಿಂದ, ಭಾರತ ಸಂವಿಧಾನದ 22 ನೇ ಅನುಚ್ಛೇದದ 4 ನೇ ಮತ್ತು 5 ನೇ ಖಂಡಗಳ ಅಡಿಯಲ್ಲಿ ನೀಡಲಾದ ರಕ್ಷಣೆಯನ್ನು ಸುರಕ್ಷಿತಗೊಳಿಸುವುದು ಮತ್ತು ಅದನ್ನು ಸತತವಾಗಿ ಜಾರಿಗೊಳಿಸುವುದು ನ್ಯಾಯಾಲಯದ ಕರ್ತವ್ಯವಾಗಿದೆ.

13. ಮೊದಲನೆಯದಾಗಿ, ಬಂಧನದ ಆದೇಶದ ವಿರುದ್ಧ ಅರ್ಜಿದಾರನು ಸಲ್ಲಿಸಿದ ಮನವಿಯನ್ನು ಪರಿಗಣಿಸದೆ ಇರುವ ಸಂಬಂಧದ ವಿಷಯವನ್ನು ನಾವು ವ್ಯವಹರಿಸುತ್ತಿದ್ದೇವೆ.ಆ ಉದ್ದೇಶಕ್ಕಾಗಿ, ಮೊದಲನೇ ಪ್ರತ್ಯರ್ಜಿದಾರರು ಸಲ್ಲಿಸಿದ ಆಕ್ಷೇಪಣೆಗಳ ಹೆಚ್ಚುವರಿ ಹೇಳಿಕೆಯ 6 ನೇ ಕಂಡಿಕೆಯನ್ನು ಪರಾಮರ್ಶಿಸುವುದು ಅವಶ್ಯಕ.15 ನೇ ಏಪ್ರಿಲ್, 2020 ರ ಮನವಿಯನ್ನು (ಅನುಬಂಧ ಆರ್ -8 ರಲ್ಲಿರುವ) ಬಂದೀಖಾನೆ ಅಧಿಕ್ಷಕರ ಮುಖಾಂತರ ಅರ್ಜಿದಾರನು ಸಲ್ಲಿಸಿದ್ದು, ಅದನ್ನು ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆ ಕಳುಹಿಸಲಾಗಿದ್ದು, ಅವರು ಪ್ರಶ್ನಿತ ಆದೇಶವನ್ನು ಹೊರಡಿಸಿದ್ದಾರೆ.16 ನೇ ಏಪ್ರಿಲ್, 2020 ರಂದು, ಮನವಿಯ ಪ್ರತಿಗಳನ್ನು, ಬಂದೀಖಾನೆ ಅಧೀಕ್ಷಕರು ಇ-ಮೇಲ್ ಮೂಲಕ, ಪ್ರಾದೇಶಿಕ ಅಧಿಕಾರಿ, ಮಾದಕವಸ್ತು ನಿಯಂತ್ರಣ ಸಂಸ್ಥೆ (ಎನ್ಸಿಬಿ), ಬೆಂಗಳೂರು ಮತ್ತು ಆಡಳಿತ ಕಚೇರಿ (ನ್ಯಾಯಾಂಗ), ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಾಣಿಕೆ ಕಾರಚಟುವಟಿಕೆಗಳ ಅಧಿನಿಯಮ/ದೆಹಲಿ ಉಚ್ಚ ನ್ಯಾಯಾಲಯದ ಮಾದಕ ವಸ್ತುಗಳು ಮತ್ತು ಚ ಅಮಲು ಪದಾರ್ಥಗಳ ಅಕ್ರಮ ಸಾಗಾಣಿಕೆ ಸಂಸ್ಥೆ, ನವ ದೆಹಲಿ ಇವರಿಗೆ ಕಳುಹಿಸಿದ್ದರು.ಆಶ್ಚರವೆಂದರೆ, ಬಂದೀಖಾನೆ ಪ್ರಾಧಿಕಾರಿಗಳು ಅದನ್ನು ಇ-ಮೇಲ್ ಮೂಲಕ ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆ ಕಳುಹಿಸಿರಲಿಲ್ಲ.ಆಕ್ಷೇಪಣೆಗಳ ಹೆಚ್ಚುವರಿ ಹೇಳಿಕೆಯಲ್ಲಿ, 15 ನೇ ಏಪ್ರಿಲ್, 2020 ರ ಮನವಿಯನ್ನು ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ಅಕ್ರಮ ಸಾಗಾಣಿಕೆಯ ನಿಷೇಧ (ಪಿಐಟಿಎನ್ಡಿಪಿಎಸ್) ಘಟಕ ಇದರ ಜಂಟಿ ಕಾವ್ಯದರ್ಶಿಗಳಿಗೆ ತ್ವರಿತ ಅಂಚೆ ಮೂಲಕ ಕಳುಹಿಸಲಾಗಿದ್ದು, ಅದನ್ನು ಲಾಕ್ಡೌನ್ ಕಾರಣದಿಂದಾಗಿ ಬಂಧಿಸುವ ಪ್ರಾಧಿಕಾರಿಯು ಸ್ವೀಕರಿಸಿರಲಿಲ್ಲ ಎಂದು ವಾದಿಸಲಾಗಿದೆ.ಇದಲ್ಲದೆ, 15 ನೇ ಏಪ್ರಿಲ್, 2020 ರ ಮನವಿಯ ಬಗ್ಗೆ ಬಂಧನ ಪ್ರಾಧಿಕಾರಿಗೆ ತಿಳಿದುಬಂದಾಗ, ೧ ಅದರ ಪ್ರತಿಯನ್ನು 29 ನೇ ಏಪ್ರಿಲ್, 2020 ರಂದು ಬೆಂಗಳೂರಿನ ಮಾದಕವಸ್ತು ನಿಯಂತ್ರಣ ಸಂಸ್ಥೆಯಿಂದ ಪಡೆಯಲಾಗಿತ್ತು.15 ನೇ ಏಪ್ರಿಲ್, 2020 ರ ಮನವಿ ಕುರಿತು 29 ನೇ ಏಪ್ರಿಲ್, 2020 ರಂದು ನಿರ್ಧರಿಸಲಾಗಿತ್ತು ಎಂದು ವಾದಿಸಿದ್ದಾರೆ.

14. ಇದಲ್ಲದೆ, ಸದರಿ ಮನವಿಯನ್ನು 18 ನೇ ಏಪ್ರಿಲ್, 2020 ರಂದು ಸಲಹಾ ಮಂಡಳಿ ಮುಂದೆ ನವ ದೆಹಲಿಯಲ್ಲಿ ನಡೆದ ಅದರ ಸಭೆಯಲ್ಲಿ ಸಹ ಮಂಡಿಸಲಾಗಿತ್ತು.ಮೊದಲನೇ ಪ್ರತ್ಯರ್ಜಿದಾರರು ಸಮರ್ಥಿಸಿಕೊಂಡ ವಾದದ ಪ್ರಕಾರ, ಅರ್ಜಿದಾರನ ವಾದವನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಆಲಿಸಿದ ನಂತರ, ಸಲಹಾ ಮಂಡಳಿಯು, 20 ನೇ ಏಪ್ರಿಲ್, 2020 ರಂದು ಕೇಂದ್ರ ಸರ್ಕಾರಕ್ಕೆ, ತನ್ನ ಅಭಿಪ್ರಾಯವನ್ನು ಸಲ್ಲಿಸಿತ್ತು.ಸಲಹಾ ಮಂಡಳಿಯ ವರದಿಯನ್ನು/ಅಭಿಪ್ರಾಯವನ್ನು ಪರಿಗಣಿಸಿದ ನಂತರ, ಕೇಂದ್ರ ಸರ್ಕಾರವು, 27 ನೇ ಏಪ್ರಿಲ್, 2020 ರ ಪ್ರತಿಬಂಧಕ ಬಂಧನದ ಆದೇಶವನ್ನು ಸ್ಥಿರೀಕರಿಸಿತು.ಇದಲ್ಲದೆ, ಕೇಂದ್ರ ಸರ್ಕಾರವು, 17 ನೇ ಏಪ್ರಿಲ್, 2020 ರಂದು ಅರ್ಜಿದಾರನು ಸಲ್ಲಿಸಿದ ಮತ್ತೊಂದು ಮನವಿಯನ್ನು ಸಹ ಪರಿಗಣಿಸಿ, 30 ನೇ ಏಪ್ರಿಲ್, 2020 ರ ಜ್ಞಾಪನಪತ್ರದ ಮೂಲಕ ತಳ್ಳಿಹಾಕಿತು.

15. ಈ ಹಂತದಲ್ಲಿ, ಅಂಕಿತ್ ಅಶೋಕ್ ಜಲಾನ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪನ್ನು ನಿರ್ದಿಷ್ಟವಾಗಿ 11 ನೇ ಕಂಡಿಕೆಯನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

"11. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಮೇಲೆ ಹೇಳಿದ ಮೊದಲ ಎರಡು ಪ್ರಶ್ನೆಗಳನ್ನು ಪ್ರಸ್ತಾಪಿಸಿ ಈ ನ್ಯಾಯಾಲಯದ ವಿವಿಧ ತೀರ್ಪುಗಳನ್ನು ನಮ್ಮ ಪರಿಗಣನೆಗಾಗಿ ಮಂಡಿಸಿದ್ದಾರೆ.ಎರಡು ದೃಷ್ಟಿಕೋನಗಳಿಂದ ಪ್ರಶ್ನೆಗಳಿಗೆ ಉತ್ತರಿಸುವುದಕ್ಕಾಗಿ ಆ ತೀರ್ಪುಗಳನ್ನು ನಾವು ಸ್ಥೂಲವಾಗಿ ಪರಿಗಣಿಸುತ್ತೇವೆ:

ಮೊದಲನೆಯದು, ಮನವಿಯನ್ನು ಸ್ವತಂತ್ರವಾಗಿ ಸಲ್ಲಿಸಬಹುದೇ ಮತ್ತು ಸಂಬಂಧಪಟ್ಟ ಸರ್ಕಾರದ, ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಯಾಗಿರುವ ಬಂಧಿಸುವ ಪ್ರಾಧಿಕಾರಿಯು ಅದನ್ನು ಪರಿಗಣಿಸಲೇಬೇಕೇ ಎಂಬ ವಿಷಯ ಕುರಿತದ್ದಾಗಿದೆ.

ಎರಡನೆಯದಾಗಿ, ಕೆಲವು ಸಂದರ್ಭಗಳಲ್ಲಿ, ಸಲಹಾ ಮಂಡಳಿಯಿಂದ ವರದಿಯನ್ನು ಸ್ವೀಕರಿಸುವವರೆಗೆ ಬಂಧಿಸುವ ಪ್ರಾಧಿಕಾರಿಯು ಅಂಥ ಮನವಿಯ ಪರಿಗಣನೆಯನ್ನು ಮುಂದೂಡಬೇಕೇ ಎಂಬುದಾಗಿದೆ. "

(ಒತ್ತು ನೀಡಲಾಗಿದೆ)

16. ಕೆ.ಎಮ್. ಅಬ್ದುಲ್ಲಾ ಕುನ್ನಿ ಮೊಕದ್ದಮೆಯಲ್ಲಿನ ಮುಂಚಿನ ತೀರ್ಪನ್ನು ಉಲ್ಲೇಖಿಸಿದ ನಂತರ, ಸರ್ವೋಚ್ಚ ನ್ಯಾಯಾಲಯವು 42 ನೇ ಕಂಡಿಕೆಯಲ್ಲಿ ಹೀಗೆ ಚ ಅಭಿಪ್ರಾಯಪಟ್ಟಿದೆ:

"42. ಆದ್ದರಿಂದ, ತನ್ನಲ್ಲಿ ನಿಹಿತವಾದ ಅಧಿಕಾರಕ್ಕನುಸಾರವಾಗಿ ಬಂಧಿಸುವ ಆದೇಶವನ್ನು ಹೊರಡಿಸುವ ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆ ಮನವಿಯನ್ನು ಸಲ್ಲಿಸಬೇಕೆಂಬುದು ಈಗ ಇತ್ಯರ್ಥವಾದ ನಿಯಮವಾಗಿದ್ದರೆ ಮತ್ತು ಅಂಥ ಬಂಧಿಸುವ ಪ್ರಾಧಿಕಾರಿಯು ಮನವಿಯನ್ನು ಸ್ವತಂತ್ರವಾಗಿ ಪರಿಗಣಿಸಬೇಕೆಂದಿದ್ದರೆ, ಕೆ.ಎಮ್ ಅಬ್ದುಲ್ಲಾ ಕುನ್ತಿ ಮೊಕದ್ದಮೆಯಲ್ಲಿನ ತೀರ್ಪಿನ 16 ನೇ ಕಂಡಿಕೆಯಲ್ಲಿ ನಿರ್ದೇಶಿಸಿದ ಸಂಬಂಧಪಟ್ಟ ತತ್ವಗಳು, ಅಂಥ ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆ ನಿರ್ದೇಶನಾತ್ಮಕ ತತ್ವಗಳಾಗುವುದಿಲ್ಲ.ಬಂಧನದ ಆದೇಶವನ್ನು ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಯು ಹೊರಡಿಸದೆ, ಸಮುಚಿತ ಸರ್ಕಾರವು ಹೊರಡಿಸಿದ್ದಲ್ಲಿ, ಕೆ.ಎಮ್. ಅಬ್ದುಲ್ಲಾ ಕುನ್ನಿ ಮೊಕದ್ದಮೆಯಲ್ಲಿನ ಚರ್ಚೆಯು ಸ ಂ ಪೂರ್ಣವಾಗಿ ಈ ಸಂದರ್ಭಕ್ಕಾಗಿದೆ ಎಂದು ಹೇಳಲೇ ಬೇಕಾಗುತ್ತದೆ.ಆದುದರಿಂದ, ಸದರಿ 16 ನೇ ಕಂಡಿಕೆಯಲ್ಲಿ ವಿಧಿಸಿದ ತತ್ವವನ್ನು, ಕಮಲೇಶ್ ಕುಮಾರ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮತ್ತೊಂದು ಸಂವಿಧಾನ ಪೀಠವು ನೀಡಿದ ತರುವಾಯದ ತೀರ್ಪಿನ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಿದೆ.(ಒತ್ತು ನೀಡಲಾಗಿದೆ)

ಇದಲ್ಲದೆ, ಮೇಲೆ ಹೇಳಿದ ತೀರ್ಪಿನ 46 ನೇ ಕಂಡಿಕೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಚ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"46. ಪ್ರಸ್ತುತ ಮೊಕದ್ದಮೆಯಲ್ಲಿ, ಮೇಲೆ ಹೇಳಿದಂತೆ ಮನವಿ ಕುರಿತು ವ್ಯವಹರಿಸಲು ಯಾವ ಬಂಧಿಸುವ ಪ್ರಾಧಿಕಾರಿಗೆ ಮನವಿಯನ್ನು ಕಳುಹಿಸಲಾಗಿತ್ತೋ, ಅವರ ಕಡೆಯಿಂದಾದ ಸಂಪೂರ್ಣ ನಿಷ್ಕ್ರಿಯತೆಯಿಂದಾಗಿ, ಬಂಧಿಗಳ ಸಾಂವಿಧಾನಿಕ ಹಕ್ಕುಗಳು ಉಲ್ಲಂಘನೆಯಾಗಿವೆ ಮತ್ತು ಬಂಧಿಗಳು ಆ ಕಾರಣದ ಮೇರೆಗೆ ಪರಿಹಾರಕ್ಕೆ ಹಕ್ಕುಳ್ಳವರಾಗಿದ್ದಾರೆ.ಆದುದರಿಂದ, ನಾವು ಈ ರಿಟ್ ಅರ್ಜಿಯನ್ನು ಪುರಸ್ಕರಿಸಿದ್ದು, ಬಂಧನದ ಆದೇಶಗಳ

ಅನುಸಾರ, ಬಂಧಿಗಳ ಮುಂದುವರಿದ ಬಂಧನವು ಕಾನೂನುಬಾಹಿರ, ಅಸಿಂಧು ಮತ್ತು ಅಸಂವಿಧಾನಿಕವಾಗಿದೆ ಎಂದು ಅಭಿಪ್ರಾಯಪಡುತ್ತೇವೆ. "(ಒತ್ತು ನೀಡಲಾಗಿದೆ)

17. ಮೊದಲನೇ ಪ್ರತ್ಯರ್ಜಿದಾರರು ತಮ್ಮ ಆಕ್ಷೇಪಣೆಗಳ ಹೆಚ್ಚುವರಿ ಹೇಳಿಕೆಯಲ್ಲಿ ತೆಗೆದುಕೊಂಡ ನಿಲುವನ್ನು ಆಧಾರವಾಗಿಟ್ಟುಕೊಂಡಲ್ಲಿ, 15 ನೇ ಏಪ್ರಿಲ್, 2020 ರಂದು ಮುಖ್ಯ ಅಧೀಕ್ಷಕರು, ಕೇಂದ್ರ ಬಂದೀಖಾನೆ, ಬೆಂಗಳೂರು ಇವರ ಮುಖಾಂತರ ಅರ್ಜಿದಾರನು ಮನವಿಯನ್ನು ಸಲ್ಲಿಸಿದ್ದನ್ನು ಎಂಬುದು ಒಪ್ಪಿಕೊಂಡ ಹೇಳಿಕೆಯಾಗಿದೆ.ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಯಾಗಿರುವ ಮತ್ತು ಪ್ರಶ್ನಿತ ಆದೇಶವನ್ನು ಹೊರಡಿಸಿರುವ ಶ್ರೀ ರವಿ ಪ್ರತಾಪ್ ಸಿಂಗ್, ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ, ಕಂದಾಯ ಇಲಾಖೆ ಮತ್ತು [ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ಅಕ್ರಮ ಸಾಗಾಣಿಕೆಯ ನಿಷೇಧ (ಪಿಐಐಎನ್ಡಿಪಿಎಸ್) ಘಟಕ] ನವ ದೆಹಲಿ ಇವರಿಗೆ ಮನವಿಯನ್ನು ಸಲ್ಲಿಸಲಾಗಿತ್ತು ಎಂಬುದು ಒಪ್ಪಿಕೊಂಡ ಹೇಳಿಕೆಯಾಗಿದೆ.ಅದನ್ನು, 16 ನೇ ಏಪ್ರಿಲ್, 2020 ರಂದು ಇ-ಮೇಲ್ ಮೂಲಕ ಪ್ರಾದೇಶಿಕ ಅಧಿಕಾರಿ, ಮಾದಕವಸ್ತು ನಿಯಂತ್ರಣ ಸಂಸ್ಥೆ, ಬೆಂಗಳೂರು ಇವರಿಗೆ ಕಳುಹಿಸಲಾಗಿತ್ತು.ಬಂಧನದ ಕಾರಣಗಳಲ್ಲಿ ಹೇಳಿರುವಂತೆ, ಮಾದಕವಸ್ತು ನಿಯಂತ್ರಣ ಸಂಸ್ಥೆ, ಬೆಂಗಳೂರು ಇದು ಜವಾಬ್ದಾರಿ ಪ್ರಾಧಿಕಾರವಾಗಿದೆ.ಮನವಿಯನ್ನು ಇ-ಮೇಲ್ ಮೂಲಕ ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆ ಕಳುಹಿಸುವಲ್ಲಿ ಆದ ತನ್ನ ಸಂಪೂರ್ಣ ವಿಫಲತೆ ಬಗ್ಗೆ ಜವಾಬ್ದಾರಿ ಪ್ರಾಧಿಕಾರದಿಂದ ಯಾವುದೇ ವಿವರಣೆ ಇಲ್ಲ. 18 ನೇ ಏಪ್ರಿಲ್, 2020 ರಂದು ನವ ದೆಹಲಿಯಲ್ಲಿರುವ ಸಲಹಾ ಮಂಡಳಿಯ ಮುಂದೆ ಮನವಿಯನ್ನು ಮಂಡಿಸಲಾಗಿತ್ತು ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳುವುದು ಸೂಕ್ತ.ಆದರೆ, ಜವಾಬ್ದಾರಿ ಪ್ರಾಧಿಕಾರವು ನವ ದೆಹಲಿಯಲ್ಲಿರುವ ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಯ ಕಚೇರಿಗೆ ಈ ಮನವಿಯನ್ನು ಎಂದಿಗೂ ಕಳುಹಿಸಿರುವುದಿಲ್ಲ.

18. ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆ ಮನವಿಯ ಪ್ರತಿಯನ್ನು ಕಳುಹಿಸಲು ಜವಾಬ್ದಾರಾದ ಪ್ರಾಧಿಕಾರಿಯ ವಿಫಲತೆಗೆ ಸಂಬಂಧಿಸಿದಂತೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.15 ನೇ ಏಪ್ರಿಲ್, 2020 ರ ಮನವಿಯ ಪ್ರತಿಯನ್ನು ಬಂದೀಖಾನೆ ಪ್ರಾಧಿಕಾರಿಗಳು ತ್ವರಿತ ಅಂಚೆ ಮೂಲಕ ಜಂಟಿ ಕಾರ್ಯದರ್ಶಿಗಳಿಗೆ [ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ಅಕ್ರಮ ಸಾಗಾಣಿಕೆ ನಿಷೇಧ (ಪಿಐಟಿಎನ್ಡಿಪಿಎಸ್) ಘಟಕ] ಕಳುಹಿಸಿದ್ದರು.ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆ ಅಥವಾ ಕೇಂದ್ರ ಸರ್ಕಾರಕ್ಕೆ ಇ-ಮೇಲ್ ಮೂಲಕ ಮನವಿಯನ್ನು ಏಕೆ ಕಳಹಿಸಲಿಲ್ಲ ಎಂಬುದಕ್ಕೆ ವಿವರಣೆ ಇಲ್ಲ.ದಿನಾಂಕ: 15 ನೇ ಏಪ್ರಿಲ್, 2020 ರ ಮನವಿಯ ಬಗ್ಗೆ ಬಂಧಿಸುವ ಪ್ರಾಧಿಕಾರಿಗೆ ತಿಳಿದುಬಂದಾಗ, ಅದನ್ನುದಿನಾಂಕ: 29 ನೇ ಏಪ್ರಿಲ್, 2020 ರಂದು ಬೆಂಗಳೂರಿನ ಮಾದಕವಸ್ತು ನಿಯಂತ್ರಣ ಸಂಸ್ಥೆಯಿಂದ ಪಡೆದುಕೊಂಡಿದ್ದರು.ನಂತರ, ಮನವಿಯನ್ನು ತರಾತುರಿಯಲ್ಲಿ ಅದೇ ದಿನದಂದು ಅಂದರೆ 29 ನೇ ಏಪ್ರಿಲ್, 2020 ರಂದೇ ವಿಲೇ ಮಾಡಿದ್ದರು.ಪ್ರಶ್ನಿತ ಆದೇಶವನ್ನು ಹೊರಡಿಸಿದ್ದ ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆದಿನಾಂಕ: 15 ನೇ ಏಪ್ರಿಲ್, 2020 ರ ಮನವಿಯನ್ನು ಕಳುಹಿಸದೇ ಇದ್ದದ್ದಕ್ಕೆ ನಿರುಪಾಧಿಕವಾಗಿ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.ಅರ್ಜಿದಾರನು ಕೇಂದ್ರ ಬಂದೀಖಾನೆಯ ಅಧೀಕ್ಷಕರ ಮುಖಾಂತರ ಕೇಂದ್ರ ಸರ್ಕಾರಕ್ಕೆದಿನಾಂಕ: 17 ನೇ ಏಪ್ರಿಲ್, 2020 ರಂದು ಮನವಿಯನ್ನು ಸಲ್ಲಿಸಿದರೂ ಸಹ, ಕೂಡಲೇ ಕೇಂದ್ರ ಸರ್ಕಾರಕ್ಕೆ ಅದನ್ನು ಕಳುಹಿಸಿರಲಿಲ್ಲವಾದರೂ ಅದನ್ನುದಿನಾಂಕ: 20 ನೇ ಏಪ್ರಿಲ್, 2020 ರಂದು ಕಳುಹಿಸಲಾಗಿತ್ತು ಮತ್ತು ಅದನ್ನು ಕುರಿತು 30 ನೇ ಏಪ್ರಿಲ್, 2020 ರಂದು ನಿರ್ಧರಿಸಲಾಗಿತ್ತು ಎಂದು ವಿಶೇಷವಾಗಿ ಹೇಳಲಾಗಿದೆ.2020 ರ 20 ನೇ ಏಪ್ರಿಲ್ನಿಂದ 30 ನೇ ಏಪ್ರಿಲ್ವರೆಗಿನ ವಿಳಂಬವನ್ನು ಕುರಿತು ವಿವರಿಸಿಯೇ ಇರುವುದಿಲ್ಲ.

19 ಆದ್ದರಿಂದ, ವಿಶೇಷವಾಗಿ ಪ್ರಾಧಿಕೃತ ಅಧಿಕಾರಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಅರ್ಜಿದಾರನು ಸಲ್ಲಿಸಿದ ಮನವಿಗಳನ್ನು ಪರಿಗಣಿಸುವಲ್ಲಿ ಅತಿಯಾದ ವಿಳಂಬವಾಗಿದೆ ಎಂಬ ನಿರ್ಣಯಕ್ಕೆ ಮಾತ್ರ ಬರಬಹುದಾಗಿದೆ.ವಾಸ್ತವದಲ್ಲಿ, ಅಂಥ ಅತಿಯಾದ ವಿಳಂಬಕ್ಕೆ ಕಾರಣಗಳನ್ನು ವಿವರಿಸುವ ಪ್ರಯತ್ನಗಳನ್ನೇ ಮಾಡಿರುವುದಿಲ್ಲ.ಆದ್ದರಿಂದ, ಭಾರತ ಸಂವಿಧಾನದ 22 ನೇ ಅನುಚ್ಛೇದದ, ನಿರ್ದಿಷ್ಟವಾಗಿ ಅದರ ( 5) ನೇ ಖಂಡದ ಅಡಿಯಲ್ಲಿ ಅರ್ಜಿದಾರನ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯಾಗಿದೆ.ಅರ್ಜಿದಾರನು ಸಲ್ಲಿಸಿದ ಮನವಿಗಳನ್ನು ಕುರಿತು ನಿರ್ಧರಿಸುವಲ್ಲಿ ಆದ ಅತಿಯಾದ ವಿಳಂಬದ ಕಾರಣದಿಂದ, ಪ್ರತಿಬಂಧಕ ಬಂಧನದ ಪ್ರಶ್ನಿತ ಆದೇಶದ ಮುಂದುವರಿಕೆಯನ್ನು ನಿರರ್ಥಕಗೊಳಿಸಿದಂತಾಗಿರುವುದರಿಂದ, ಪ್ರಶ್ನಿತ ಬಂಧನದ ಆದೇಶವನ್ನು ತಳ್ಳಿ ಹಾಕಬೇಕಾಗುತ್ತದೆ.

20. ತದನುಸಾರವಾಗಿ, ನಾವು ಈ ಮುಂದಿನ ಆದೇಶವನ್ನು ಹೊರಡಿಸುತ್ತೇವೆ:

ಆದೇಶ

(1) ಮೊದಲನೇ ಪ್ರತ್ಯರ್ಜಿದಾರರು ಹೊರಡಿಸಿದ ಯು -11011/ 1/2019-ಪಿಐಟಿಎನ್ಡಿಪಿಎಸ್ ಕಡತ ಸಂಖ್ಯೆಯನ್ನು ಹೊಂದಿರುವ 23 ನೇ ಜನವರಿ, 2020 ರ ಪ್ರಶ್ನಿತ ಆದೇಶವನ್ನು ಈ ಮೂಲಕ ರದ್ದುಗೊಳಿಸಲಾಗಿದೆ ಮತ್ತು ತಳ್ಳಿಹಾಕಲಾಗಿದೆ.ತತ್ಪರಿಣಾಮವಾಗಿ, ಕೇಂದ್ರ ಸರ್ಕಾರವು ಹೊರಡಿಸಿದದಿನಾಂಕ: 27 ನೇ ಏಪ್ರಿಲ್, 2020 ರ ಸದರಿ ಬಂಧನ ಆದೇಶವನ್ನು ಸ್ಥಿರೀಕರಿಸಿದ ಆದೇಶವು ಸಹ ರದ್ದುಗೊಳ್ಳುತ್ತದೆ;

(ii) ಅರ್ಜಿದಾರ/ಕೆನೆತ್ ಜಿಡಿಯೋಫರ್ನು ಯಾವುದೇ ಇತರ ಮೊಕದ್ದಮೆ ಸಂಬಂಧದಲ್ಲಿ ಅಗತ್ಯನಿರದಿದ್ದರೆ, ಆತನನ್ನು ಬೆಂಗಳೂರು ಕೇಂದ್ರ ಬಂದೀಖಾನೆಯಿಂದ ತಕ್ಷಣವೇ ಬಿಡುಗಡೆ ಮಾಡತಕ್ಕದ್ದು ಎಂದು ನಾವು ನಿರ್ದೇಶಿಸುತ್ತೇವೆ;

(iii) ಮೇಲಿನ ನಿಬಂಧನೆಗಳ ಆಧಾರದ ಮೇಲೆ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ.